ಸಂಪ್ರದಾಯವಾದಿಗಳಲ್ಲಿ ಇರುವುದು ಸಹಜ. ಅಂದರೆ, ಕೆಲವು ವರ್ಷಗಳ ಕಾಲ ಸಹಬಾಳ್ವೆಯನ್ನು ಒಪ್ಪಿಕೊಂಡು, ಬಳಿಕ ಈ ಒಪ್ಪಂದದಿಂದ ಹೊರಬರುವ ಗಂಡು, ಈ ಸಮಾಜವನ್ನು ರಾಜಾರೋಷವಾಗಿ ಎದುರಿಸಿದಷ್ಟು ಸುಲಭವಾಗಿ, ಹೆಣ್ಣು ಈ ಸಮಾಜವನ್ನು ಎದುರಿಸುತ್ತಾಳೆಯೇ? ಎದುರಿಸುವ ಸ್ಥಿತಿ ಸಮಾಜದಲ್ಲಿದೆಯೆ? ಒಂದುವೇಳೆ ಮಕ್ಕಳಾದಲ್ಲಿ ಅದರ ಹೊಣೆಗಾರಿಕೆಯನ್ನು ಸಹಬಾಳ್ವೆ ಆರಂಭಿಸುವುದಕ್ಕೆ ಪೂರ್ವದಲ್ಲಿ ನಿರ್ಧರಿಸಿದಂತೆ ನಿಭಾಯಿಸುವುದು ಕಾರ್ಯಸಾಧುವೇ? ಅಲ್ಲಿ ಉಂಟಾಗುವ ಸಂದಿಗ್ಧತೆಗಳನ್ನು ಮಗು ಕೂಡ ಎದುರಿಸುವುದು ಸುಲಭವೇನೂ ಇರುವುದಿಲ್ಲ. ಅಪ್ಪನಿಂದ ದೊರೆಯುವ ಭಾವನಾತ್ಮಕ ಸಾಂತ್ವನಗಳು ಮಗುವಿಗೆ ಲಭ್ಯವಾಗುವುದಿಲ್ಲ ಎಂಬುದೂ ಗಮನಾರ್ಹ. ಕಾನೂನಾತ್ಮಕವಾಗಿ ಮಗುವಿಗೆ ಆರ್ಥಿಕ ಆಧಾರ ದೊರೆಯುವ ಖಾತ್ರಿಯಿದ್ದರೂ ಸಾಮಾಜಿಕವಾಗಿ ಕ್ಷೇಮಭಾವವು ಎಷ್ಟರಮಟ್ಟಿಗೆ ದೊರೆಯುತ್ತದೆ ಎನ್ನುವುದು ಪ್ರಶ್ನೆಯಾಗಿಯೇ ಉಳಿಯುತ್ತದೆ. ಸಹಬಾಳ್ವೆಯಲ್ಲಿರುವ ಇಬ್ಬರು ವ್ಯಕ್ತಿಗಳು ಬೇರೆ ಬೇರೆ ಧರ್ಮದವರಾಗಿದ್ದಾಗ ಬಿಕ್ಕಟ್ಟು ತುಸು ವಿಪರೀತವೂ ಆಗಬಹುದು. ಸಮಾಜವು ಎಲ್ಲಿಯವರೆಗೆ ನೈತಿಕತೆಯನ್ನು ಹೆಣ್ಣೊಬ್ಬಳೇ ಭರಿಸಬೇಕು ಎಂದು ಬಯಸುತ್ತಾ ಉಳಿದುಬಿಡುತ್ತದೋ, ಅಲ್ಲಿಯವರೆಗೆ ಇದು ಹೆಣ್ಣಿಗೆ ಒತ್ತಡವಾಗಿ ಉಳಿದುಬಿಡುತ್ತದೆ.

ಹೀಗೆ ಪಾಶ್ಚಾತ್ಯ ಸಮಾಜಕ್ಕೂ, ಭಾರತೀಯ ಸಮಾಜಕ್ಕೂ ಇರುವ ವ್ಯತ್ಯಾಸಗಳು ಆಗಾಗ ಈ ಸಂಬಂಧದ ನಿರ್ವಹಣೆಯಲ್ಲಿ ತೊಡಕುಂಟು ಮಾಡಿದಂತೆ ಭಾಸವಾಗಬಹುದು. ಉದಾಹರಣೆಗೆ ಬೇರೆ ದೇಶಗಳಲ್ಲಿ ಆರೋಗ್ಯ, ಆಹಾರ ಮುಂತಾದ ತೀರಾ ಮೂಲಭೂತ ಅಗತ್ಯಗಳನ್ನು ಭರಿಸುವ ಹೊಣೆಯನ್ನು ಸರ್ಕಾರ ವಹಿಸಿಕೊಂಡಿರುವಾಗ, ದೈನಂದಿನ ಜೀವನದಲ್ಲಿ ಅಭದ್ರತೆಯೆಂಬುದು ಕಾಡುವುದಿಲ್ಲ. ಆದರೆ ಭಾರತದಲ್ಲಿ ಇಂತಹ ಅನೇಕ ವಿಚಾರಗಳನ್ನು ವ್ಯಕ್ತಿಯೇ ಆಲೋಚಿಸಿ ನಿಭಾಯಿಸಬೇಕಾಗಿದೆ. ಹಾಗಾಗಿ, ಸಂಬಂಧಗಳನ್ನೂ ವ್ಯಕ್ತಿಯು ಎಷ್ಟು ಪ್ರಯೋಜನಕಾರಿ ಎಂಬ ದೃಷ್ಟಿಕೋನದಲ್ಲಿಯೇ ನೋಡುವ ಅಪಾಯವಿದೆ. ಇದೇ ಅಪಾಯವು ಮದುವೆ ಎಂಬ ಬಂಧನದಲ್ಲಿಯೂ ಇದ್ದೇ ಇರುತ್ತದೆಯಾದರೂ, ಅಲ್ಲಿ ತಕ್ಕಮಟ್ಟಿಗೆ ಕೌಟುಂಬಿಕ ಮುಜುಗರ, ಕಾನೂನಾತ್ಮಕ ಸಂರಕ್ಷಣೆಯು ಕೆಲಸ ಮಾಡೀತು.

ಲಿವ್ ಇನ್ ರಿಲೇಷನ್‌ಶಿಪ್ ಕೂಡ ಕೌಟುಂಬಿಕ ಸಂಬಂಧದ ಮಾದರಿಯ ವ್ಯಾಪ್ತಿಗೆ ಬರುವುದರಿಂದ 'ಡಿಡಬ್ಲ್ಯುಡಿವಿ ಕಾಯಿದೆ 2005'ರ ಸೆಕ್ಷನ್ 2 (ಎಫ್) ವ್ಯಾಪ್ತಿಗೆ ಈ ಸಂಬಂಧವು ಬರುತ್ತದೆ ಎಂದು 2013ರಲ್ಲಿ ಸುಪ್ರೀಂ ಕೋರ್ಟ್ ಹೇಳಿರುವುದು ಈ ಸಂಬಂಧದ ವ್ಯಾಪ್ತಿಯಲ್ಲಿರುವ ಮಹಿಳೆಯರಿಗೆ ತುಸು ಅನುಕೂಲ ಕಲ್ಪಿಸಿದಂತಾಗಿದೆ. 2016ರಲ್ಲಿ ಪಂಜಾಬ್ ಹೈಕೋರ್ಟ್, ಅಜಯ್ ಭಾರದ್ವಾಜ್ ವರ್ಸಸ್ ಜ್ಯೋತ್ಸ್ನಾ ಪ್ರಕರಣದಲ್ಲಿ ಲಿವ್ ಇನ್ ರಿಲೇಷನ್‌ಶಿಪ್‌ನಲ್ಲಿ ಇರುವ ಮಹಿಳೆಯು



ಸಂಬಂಧದಿಂದ ಹೊರನಡೆದಲ್ಲಿ ಜೀವನಾಂಶ ಪಡೆಯಲು ಅರ್ಹಳಾಗಿರುತ್ತಾಳೆ ಎಂದು ಹೇಳಿದೆ. ಮದುವೆಯಾದ ಮಹಿಳೆ ವಿಚ್ಛೇದನ ಹೊಂದಿದಲ್ಲಿ ಆಕೆಗೆ ಜೀವನ ನಡೆಸಲು ಬೇಕಾದಷ್ಟು ಆದಾಯ ಇಲ್ಲದೇ ಇದ್ದಾಗ ಜೀವನಾಂಶ ಪಡೆಯಲು ಅರ್ಹಳು. ಮಳೀಮಠ ಸಮಿತಿ ವರದಿಯು 'ಹೆಂಡತಿ' ಎಂದರೆ ಗಂಡಿನ ಜೊತೆಗೆ ಹೆಂಡತಿಯಂತೆಯೇ ಗಮನಾರ್ಹ ಅವಧಿಯವರೆಗೆ ಜೀವಿಸಿದ ಮಹಿಳೆ ಎಂಬರ್ಥದಲ್ಲಿ ಅರ್ಥವನ್ನು ವಿಸ್ತರಿಸಿದ ಬಳಿಕ, ಲಿವ್ ಇನ್ ರಿಲೇಷನ್‌ಶಿಪ್‌ನಲ್ಲಿದ್ದು, ಸಂಬಂಧದಿಂದ ಹೊರಬಂದ ಮಹಿಳೆಗೂ ಜೀವನಾಂಶ ಕೊಡಬೇಕಾಗುತ್ತದೆ.

## ಸೌಹಾರ್ದವೇ ಸಂಬಂಧದ ಉಳಿವಿಗೆ ಮೂಲ

ಕಾನೂನಿನ ವಿಚಾರಗಳನ್ನು ಎಷ್ಟೇ ಸೂಕ್ಷ್ಮವಾಗಿ ಅವಲೋಕಿಸಿದರೂ, ಗಂಡು–ಹೆಣ್ಣು ಎಂಬ ಮನುಷ್ಯರಿಬ್ಬರು ಸೌಹಾರ್ದವಾಗಿ ಬಾಳುವುದೇ ಸಂಬಂಧದ ಉದ್ದೇಶವಾಗಿರುತ್ತದೆ. ಮದುವೆಯ ಮೂಲ ಉದ್ದೇಶವೂ ಇದೇ ಆಗಿರುತ್ತದೆ. ಒಂದುವೇಳೆ ಸೌಹಾರ್ದತೆಯು ಸಾಧ್ಯವಿಲ್ಲದೇ ಇದ್ದಾಗ ಪರಸ್ಪರ ಗೌರವದಿಂದ ಪ್ರತ್ಯೇಕವಾಗಿ ಬಾಳುವುದು ತಪ್ಪಲ್ಲ ಎಂದು ಮದುವೆಯಾದವರೂ ನಿರ್ಧರಿಸಬಹುದು. ಎಲ್ಲಿಯವರೆಗೆ ವ್ಯಕ್ತಿಗೌರವ, ಪ್ರಾಮಾಣಿಕತೆಗಳು ಅಂತರಂಗದಲ್ಲಿ ಉಳಿದಿರುತ್ತದೋ, ಅಲ್ಲಿಯವರೆಗೆ ಪರಿಸ್ಥಿತಿಯು ಹದಗೆಡುವುದಿಲ್ಲ. ಅಪರಾಧಗಳಿಗೆ ಜಾಗ ಇರುವುದಿಲ್ಲ. ಆದರೆ, ಯಾವಾಗ ಅಂತರಂಗದಲ್ಲಿ ತಾನು ಮೇಲೆಂಬ ಅಹಂ ಮತ್ತು ಜೊತೆಗೆ ಬಾಳಲು ಸಾಧ್ಯವಾಗದವರನ್ನು ಹಣಿದು, ಹತ್ತಿಕ್ಕಬೇಕು ಎಂಬ ವ್ಯಗ್ರ ರೋಷವು ಉಕ್ಕೇರುತ್ತದೋ, ಆಗ ಸಂಬಂಧಗಳು ತೀವ್ರವಾಗಿ ಹದಗೆಡುತ್ತವೆ. ಗಂಡುಹೆಣ್ಣಿನ ಸಹಬಾಳ್ವೆಯಲ್ಲಿ ಅದು ಅವರೊಡನೆ ಈ ಲೋಕವನ್ನು ಪ್ರವೇಶಿಸಿದ ಮಕ್ಕಳ ಮೇಲೆ ಪ್ರಭಾವ ಬೀರುತ್ತದೆ.

ಮೈಸೂರಿನಲ್ಲಿ ವಕೀಲರೂ ಆಗಿರುವ